## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
## ದಕ್ಷಿಣ ಕನ್ನಡ, ಮಂಗಳೂರು

## ಸ್ಪೆಷಲ್ ಕೇಸ್ ನಂಬ್ರ 11/2022

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಡಾ. ಗಿರೀಶ ಕೆ.ಎಸ್. | ಹೆಚ್ಚುವರಿ ಸಾಕ್ಷಿ |
| ತಂದೆಯ ಹೆಸರು | : | ಕೆ. ಶ್ರೀನಿವಾಸ ಹಂದೆ | ಚಾಸಾಃ 18 |
| ಪ್ರಾಯ | : | 42 ವರ್ಷ | ದಿನಾಂಕಃ 16.02.2026 ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಸಹಾಯಕ ನಿರ್ದೇಶಕರು, RFSL, ಮಂಗಳೂರು | |
| ವಾಸಸ್ಥಳ | : | ಮಂಗಳೂರು | |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನಾನು ಮಾರ್ಚ್ 2022 ರಿಂದ ಅಕ್ಟೋಬರ್ 2025 ರವರೆಗೆ ಮಂಗಳೂರಿನ RFSL ನಲ್ಲಿ ಹಿರಿಯ ವೈಜ್ಞಾನಿಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ನಾನು Organic Chemistry ಯಲ್ಲಿ M.Sc., Ph.D. ಪದವೀಧರ ಇರುತ್ತೇನೆ. 2014 ರಲ್ಲಿ FSL ಬೆಂಗಳೂರಿನಲ್ಲಿ 15 ದಿನಗಳ ತರಬೇತಿ ಪಡೆದಿರುತ್ತೇನೆ. NICFS, ದೆಹಲಿಯಲ್ಲಿ ವಿವಿಧ ಹಂತದ ತರಬೇತಿಯನ್ನು ಪಡೆದಿರುತ್ತೇನೆ. 1400 ಕ್ಕೂ ಹೆಚ್ಚು ಪ್ರಕರಣಗಳನ್ನು ವಿಶ್ಲೇಷಿಸಿ ವರದಿ ನೀಡಿರುತ್ತೇನೆ. 180 ಕ್ಕೂ ಹೆಚ್ಚು ಪ್ರಕರಣದಲ್ಲಿ ಸಾಕ್ಷಿ ನುಡಿದಿರುತ್ತೇನೆ.

3. ಈ ಕೇಸಿಗೆ ಸಂಬಂಧಿಸಿದಂತೆ ದಿನಾಂಕ 9.07.2021 ರಂದು ಒಂದು ಸೀಲು ಮಾಡಿದ ಒಂದು ಬಟ್ಟೆಯ ಪ್ಯಾಕೆಟ್‌ನ್ನು ಹಾಗೂ ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಚಾಸಾ-26 ಇವರ ಮೂಲಕ ನಮ್ಮ ಕಚೇರಿಯಲ್ಲಿ ಸ್ವೀಕರಿಸಲಾಯಿತು. ಅದನ್ನು ದಿನಾಂಕ

1.02.2022 ರಿಂದ ಪರೀಕ್ಷೆಗೆ ಒಳಪಡಿಸಲಾಯಿತು. ಪ್ರತಿಯೊಂದು Article ಗಳ ಮೇಲೆ ನ್ಯಾಯಾಲಯದ ಅರಗು ಸೀಲು ಇದ್ದು ತನಿಖಾಧಿಕಾರಿ ಕಳುಹಿಸಿದ್ದ ಮಾದರಿಯ ಮೊಹರಿನೊಂದಿಗೆ ತಾಳೆಯಾಗುತ್ತಿತ್ತು. ಅದನ್ನು ತನಿಖಾಧಿಕಾರಿಯು C ಎಂದು ಗುರುತಿಸಿದ್ದರು.

4. C ಬಟ್ಟೆಯ ಪ್ಯಾಕೆಟನ್ನು ತೆರೆದು ನೋಡಿದಾಗ ಅದರಲ್ಲಿ ಗಿಡದ ಒಣಗಿದ ಭಾಗಗಳಾದ ಗೆಲ್ಲು, ಹಸಿರು ಎಲೆಗಳು, ಮೊಗ್ಗು, ಹೂವು ಹಾಗೂ ಬೀಜದಿಂದ ಕೂಡಿದ್ದು ನಿರ್ದಿಷ್ಟ ವಾಸನೆ ಹೊಂದಿತ್ತು. ಅದನ್ನು ತೂಕ ಮಾಡಲಾಗಿ 31.79 ಗ್ರಾಂ ನಷ್ಟು ಇತ್ತು.

5. ಅದನ್ನು ವಿವಿಧ ರಾಸಾಯನಿಕ ಪರೀಕ್ಷೆಗಳಿಗೆ ಅಂದರೆ Microscoping characteristics, Para aminophenol test, High Performance Thin Layer Chromatography ಒಳಪಡಿಸಿದಾಗ C ನಲ್ಲಿ ಗಾಂಜಾ ಇರುವುದು ಖಚಿತವಾಗಿರುತ್ತದೆ. ಗಾಂಜಾ ಇದು ಮನೋವಿದ್ರಾವಕ ವಸ್ತುವಾಗಿರುತ್ತದೆ.

6. C ನ್ನು ಪರೀಕ್ಷೆಯ ನಂತರ ತೂಕ ಮಾಡಿದಾಗ 26.03 ಗ್ರಾಂ ನಷ್ಟು ಇತ್ತು. ಅದನ್ನು ಅದೇ ಬಟ್ಟೆ ಚೀಲದಲ್ಲಿ ಹಾಕಿ ಕಚೇರಿಯ ಮೊಹರಿನಿಂದ ಸೀಲು ಮಾಡಿ ತನಿಖಾಧಿಕಾರಿಯವರಿಗೆ ವರದಿಯೊಂದಿಗೆ ನೀಡಿರುತ್ತೇನೆ.

7. ದಿನಾಂಕ 4.02.2022 ರಂದು ವರದಿಯನ್ನು ಕಚೇರಿಯ ಮಾದರಿಯ ಮೊಹರಿನೊಂದಿಗೆ ಹಾಗೂ ಸೀಲು ಮಾಡಿದ ವಸ್ತುಗಳನ್ನು ತನಿಖಾಧಿಕಾರಿಯವರಿಗೆ ನೀಡಿರುತ್ತೇನೆ. ಈಗ ನೋಡಿದ ವರದಿಯನ್ನು ನಾನು ನೀಡಿದ್ದು ಅದನ್ನು ನಿಪಿ−46 ಎಂದು, ಅದರಲ್ಲಿರುವ ಸಾಕ್ಷಿಯ ಎರಡು ಸಹಿಗಳನ್ನು ಒಟ್ಟಾಗಿ ನಿಪಿ−46(ಎ) ಮತ್ತು 46(ಬಿ) ಎಂದು ಗುರುತಿಸಲಾಯಿತು.

8. ಮಾದರಿ ಮೊಹರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ−47 ಎಂದು, Seal impression ನ್ನು ನಿಪಿ−47(ಎ), ಸಾಕ್ಷಿಯ ಸಹಿಯನ್ನು ನಿಪಿ−47(ಬಿ) ಎಂದು ಗುರುತಿಸಲಾಯಿತು.

9. (ಬಟ್ಟೆಯ ಪ್ಯಾಕೆಟ್ ನಲ್ಲಿ ಉಳಿದ ಗಾಂಜಾವನ್ನು ಇಟ್ಟು ಸೀಲು ಮಾಡಿದ್ದನ್ನು

ತೆರೆದ ನ್ಯಾಯಾಲಯದಲ್ಲಿ ತೆಗೆದು ಅದರಲ್ಲಿರುವ ವಸ್ತುವನ್ನು ಸಾಕ್ಷಿಗೆ ತೋರಿಸಲಾಗಿರುತ್ತದೆ). ಸಾಕ್ಷಿಯು ಸದರಿ ಪ್ಯಾಕೆಟ್ ನಲ್ಲಿ ಇದ್ದ ವಸ್ತುವನ್ನು ತಾನು ಪರೀಕ್ಷಿಸಿದ ನಂತರ ತನಿಖಾಧಿಕಾರಿಗೆ ಕಳುಹಿಸಿಕೊಟ್ಟ ಗಾಂಜಾವಾಗಿರುತ್ತದೆ ಎಂದು ಹೇಳಿರುತ್ತಾರೆ. ಅದನ್ನು ಮುದ್ದೆ ಮಾಲು – 5 ಎಂದು ಗುರುತಿಸಲಾಯಿತು. ಸದರಿ ಬಟ್ಟೆಯ ಪ್ಯಾಕೆಟ್ ನಲ್ಲಿರುವ C ಎಂದು ಬರೆದಿರುವ ನ್ಯಾಯಾಧೀಶರು ಸಹಿ ಮಾಡಿದ ಚೀಟಿಯನ್ನು ನಿಪಿ–48 ಎಂದು, ಸಾಕ್ಷಿಯ ಸಹಿಯನ್ನು ನಿಪಿ–48(ಎ) ಎಂದು ಗುರುತಿಸಲಾಯಿತು. ಸದರಿ ಬಟ್ಟೆಯ ಪ್ಯಾಕೆಟ್ ನಲ್ಲಿರುವ C ಎಂದು ಬರೆದಿರುವ ತನಿಖಾಧಿಕಾರಿಯವರು ಸಹಿ ಮಾಡಿದ ಚೀಟಿಯನ್ನು ನಿಪಿ–49 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ನೇ ಆರೋಪಿ ಶ್ರೀ ಎ.ಎಂ.ಜೆ. ಪರ ಶ್ರೀ ವಿ.ಆರ್.ಎ. ವಕೀಲರ ಪರವಾಗಿಃ**

ಪಾಟೀ ಸವಾಲು ಏನು ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.